ಅನ್ನಿಸತೊಡಗಿತು. ಕವಿತಳಲ್ಲಿ ತನ್ನ ಮನಸ್ಸಿನಲ್ಲಿದ್ದದ್ದನ್ನ ಹೇಳಿಕೊಳ್ಳಬೇಕಿತ್ತು. ತಪ್ಪು ಮಾಡಿಬಿಟ್ಟೆ ಎನ್ನುವ ಕೊರಗು ಬಾಧಿಸತೊಡಗಿತು.

ಅಂಗಡಿಗೆ ಬಂದ ಮನೋಹರನ ಬಳಿ ಗೋಪಿ, 'ಅಮ್ಮ ಬಂದಿದ್ರು, ನೀನು ಮಧ್ಯಾಹ್ನ ಊಟಕ್ಕೆ ಬರ್ಲಿಲ್ಲಂತೆ, ಕೇಳ್ತಾ ಬಂದ್ರು' ಎಂದ. 'ನೀನೇನಂದೆ?' ಎಂದಿದ್ದಕ್ಕೆ, 'ಅಣ್ಣ ಡೆಕೋರೇಷನ್‌ಗೆ ಹೋಗಿದಾನೆ, ಊಟಕ್ಕೆ ಬರೋದಿಲ್ಲ ಎಂದು ಹೇಳಿದ್ದ ಎಂದು ಹೇಳ್ದೆ' ಎಂದು ಅವಡುಗಚ್ಚಿದ; ತಾನು ಸುಳ್ಳು ಹೇಳಿದ್ದು ತಪ್ಪಾಯ್ತೇನೋ ಎನ್ನುವ ಕಾರಣಕ್ಕೆ. 'ಚೋಲೋ ಆಯ್ತು' ಎಂದ ಮನೋಹರ.

ರಾತ್ರಿ ಮನೆಗೆ ಹೋದ ಮನೋಹರನ ಮುಖಭಾವ ಗಮನಿಸಿದ ಅಮ್ಮ, ತಂಗಿಯರಿಬ್ಬರಿಗೂ ಬೆರಗುಪಟ್ಟರು. ಮನೋಹರನಿಗೆ ಕವಿತಾಳ ಮೇಲಿದ್ದ ಭಾವನೆಯನ್ನ ಸೂಕ್ಷ್ಮವಾಗಿ ಅರ್ಥೈಸಿಕೊಂಡಿದ್ದ ಅಮ್ಮ, ತಂಗಿಯರಿಬ್ಬರಿಗೂ ಸಮಾಧಾನವೆನ್ನಿಸಿತು. ಊಟಕ್ಕೆ ಕುಳಿತಾಗ ಸಾವಿತ್ರಿ ತಡೆಯಲಾಗದೇ, 'ಮನ್ನೂ, ಮಧ್ಯಾಹ್ನ ಕವಿತಾ ಬಂದಿದ್ಲು, ನಂಗೆ ಇಷ್ಟು ಬೇಗ ಲಗ್ನ ಬೇಡಿತ್ತು, ಎಂತಾ ಮಾಡೋದು ಅಪ್ಪ, ಅಮ್ಮ ವರಾತ ಹಿಡಿದುಬಿಟ್ರು, ಮತ್ತೆ ಇಬ್ಬರು ತಂಗಿಯರಿದ್ದಾರಲ್ವಾ, ನನ್ನಿಂದ ಅವರಿಗೆ ತೊಂದರೆಯಾದ್ರೆ ಅಂತಾ ಒಪ್ಕೋಬಿಟ್ಟೆ ಅಂದ್ಲು' ಎಂದು ಸಣ್ಣಗೆ ನಿಟ್ಟುಸಿರೆಳೆದಳು.

ಶ್ರೀ ಭೂತೇಶ್ವರಿ ಕಲ್ಯಾಣಮಂಟಪದಲ್ಲಿ ಮದುವೆಮಂಟಪದ ಸಿದ್ಧತೆಗೆ ಮನೋಹರ, ಗೋಪಿ ಮದುವೆ ಹಿಂದಿನ ದಿನವೇ ತೊಡಗಿದ್ದರು. ಎರಡು ದಿನಕ್ಕೊಮ್ಮೆ ಬರುತ್ತಿದ್ದ ಗೋವಿಂದಣ್ಣ, 'ಬೀಗರ ಮನಸ್ಸು ತೃಪ್ತಿಯಾಗುವ ರೀತಿಯಲ್ಲಿ ಡೆಕೋರೇಶನ್ ಆಗಬೇಕು ಮನ್ನೂ' ಎಂದು ಪಿರಿಪಿರಿ ಮಾಡುತ್ತಿದ್ದ. ತನ್ನೊಳಗಿನ ಘಾಸಿಯನ್ನು ತಡೆದುಕೊಂಡು ಮನೋಹರ ನಗುತ್ತಲೇ, 'ನಿಂಗೆ ಅದರ ಚಿಂತೆ ಯಾಕೆ? ನನ್ನ ಎಲ್ಲ ಟೆಕ್ನಿಕ್ ಅನ್ನು ತೋರಿಸ್ತೆ. ನೀನು ಉಳಿದದ್ದರ ಬಗ್ಗೆ ತಲೆಬಿಸಿ ಮಾಡ್ಕೋ' ಎಂದಿದ್ದ. ಮನೋಹರನ ಚೇಷ್ಟೆಗೆ ಹುರುಪಾದ ಗೋಪಿ, 'ಗೋವಿಂದಣ್ಣ, ಮದ್ವೆಗೆ ಬಂದವರಿಗೆಲ್ಲ ಬರೇ ಮಂಟಪ ತೋರಿಸ್ತ್ಯೋ, ಇಲ್ಲಾ ಒಳ್ಳೇ ಊಟ ಹಾಕಿಸ್ತ್ಯೋ?' ಎಂದು ರೇಗಿಸಿದ. ಪ್ರವೇಶದ್ವಾರ, ಮಂಟಪ ಎಲ್ಲದರ ತಯ್ಯಾರಿ ಮುಗಿಸಿ, ಕೊನೆಯದಾಗಿ ಥರ್ಮೋಕೋಲ್‌ನಲ್ಲಿ ಮದುಮಕ್ಕಳ ಹೆಸರು ಕೊರೆಯುವಾಗ ಯಾಕೋ ಮನೋಹರನಿಗೆ ತಡೆಯಲಾಗಲಿಲ್ಲ. ಮದುಮಗನ ಹೆಸರಿನ ಜಾಗದಲ್ಲಿ ತನ್ನ ಹೆಸರು ಇರಬೇಕಿತ್ತು, ಛೇ ಅನ್ನಿಸಿ ಕಣ್ಣು ತೇವಗೊಂಡಿತು. ತನ್ನ ಬಳಿ ಹೆಸರು ಕೊರೆಯಲಾಗದು ಅನ್ನಿಸಿ, 'ಗೋಪಿ, ನಿಂಗೆ ಛಾಲೆಂಜ್ ಕೊಡ್ತೆ. ಎಷ್ಟು ಚಂದಾ ಕಾಣುವ ಹಂಗೆ ಮಾಡ್ತಿಯೋ ನೋಡು, ಸಮಾ ಆಗದಿದ್ರೆ ನಂತರ ನಾನು ಸರಿಮಾಡ್ತೆ' ಎಂದು ಆ ಕೆಲಸ ಅವನಿಗೊಪ್ಪಿಸಿ ಹೋಗಿಬಿಟ್ಟ.

ಮದುವೆಯ ಸಂಭ್ರಮ, ಗೌಜಿ, ಗದ್ದಲ, ಊಟ ಎಲ್ಲ ಮುಗಿದು ದಿಬ್ಬಣ ಕೂಡ ಕಲ್ಯಾಣ ಮಂಟಪದಿಂದ ನಿರ್ಗಮಿಸಿತ್ತು. ಆವರೆಗೂ ಅಲ್ಲೆಲ್ಲೂ ಸುಳಿದಿರದ ಮನೋಹರ ಮಧ್ಯಾಹ್ನದ ನಂತರ ಅಲ್ಲಿಗೆ ಬಂದ. ಅಸ್ತವ್ಯಸ್ತವಾಗಿ ಹರಡಿಕೊಂಡ ಕುರ್ಚಿ, ನೆಲದಲ್ಲಿ ಹರಡಿಕೊಂಡ ಅಕ್ಷತೆ, ನೆಲದಮೇಲೆ ಬಾಡುತ್ತಿದ್ದ ಹೂಗಳ ನಡುವೆ ನಿನ್ನೆ ಬೆಳಿಗ್ಗೆಯಿಂದ ರಾತ್ರಿಯೆಲ್ಲ ನಿದ್ದೆಗೆಟ್ಟು ಕಟ್ಟಿದ ಮದುವೆಮಂಟಪ ಬಣಗುಡುತ್ತಿತ್ತು. ಚೈತನ್ಯವೆಲ್ಲ ಸೋರಿಹೋದಂತೆ ನಿಸ್ಸಾರವಾಗಿ ತೋರುತ್ತಿತ್ತು.

ಮಂಟಪಕ್ಕೆ ಬಳಸಿದ ತಮ್ಮ ವಸ್ತುಗಳನ್ನೆಲ್ಲ ಸಂಜೆಯೊಳಗೆ ತೆಗೆಯಬೇಕಿತ್ತು. ಗೋಪಿ ಈ ಮದುವೆಯ ನೆಪ ಹೇಳಿ ಇಡೀ ದಿನದ ರಜೆ ಮಾಡಿದ್ದ. ಗತ್ಯಂತರವಿಲ್ಲದೇ ಮನೋಹರನೇ ಆ ಕೆಲಸ ಮಾಡಬೇಕಾಗಿಬಂದಿತ್ತು. ಮದುವೆ ಮನೆಯವರು, ನೆಂಟರಿಷ್ಟರೆಲ್ಲ ಇಷ್ಟೊತ್ತಿಗಾಗಲೇ ಹೋಗಿರಬೇಕೆಂದು ಬಂದ ಮನೋಹರ ಕಳಚುವ ಕೆಲಸಕ್ಕೆ ಕೈ ಹಚ್ಚುವ ಮುನ್ನ ತಡೆದ. ಯಾಕೋ ಅದನ್ನು ತೆಗೆಯುವ ಮನಸ್ಸಾಗಲಿಲ್ಲ. ಸ್ವಲ್ಪ ತಡೆಯುವಾ ಎಂದುಕೊಂಡು ಕಲ್ಯಾಣಮಂಟಪದ ಓರಿಯ ಕಟ್ಟೆಯ ಮೇಲೆ ಕುಳಿತ.